# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

**SARAYU** - Kannada Monthly Regn. No. KARKAN/2014/62363
**February Vol. : 10** **Issue : 10** 5125/ಶೋಭಕೃತ್ ಸಂವತ್ಸರ 2024 ಮಾರ್ಚ್ ಪುಟ 8 **Rs. 10/-**

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24


## ಶ್ರೀರಾಮ ವಿದ್ಯಾಕೇಂದ್ರದ ಶೈಕ್ಷಣಿಕ ಚಟುವಟಿಕೆಗಳನ್ನು ವೀಕ್ಷಿಸಿದ

# ಯತಿಶ್ರೇಷ್ಠರು - ಗಣ್ಯರು


22.02.2024

ಕೊಲ್ಹಾಪುರ, ಶ್ರೀ ಕನೇರಿ ಮಠದ ಪರಮಪೂಜ್ಯ ಶ್ರೀ ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ, ಬೆಳಗಾವಿಯ ಶ್ರೀ ಜಗದ್ಗುರು ದುರದುಂಡೀಶ್ವರ ಸಿದ್ಧಸಂಸ್ಥಾನ ಮಠ ನಿಡಸೋಸಿಯ ಪರಮಪೂಜ್ಯ ಶ್ರೀ ಶ್ರೀ ನಿಜಲಿಂಗೇಶ್ವರ ಸ್ವಾಮೀಜಿ, ರಂಗಭೂಮಿ ಕಲಾವಿದ ಹಾಗೂ ನಿರ್ದೇಶಕರಾದ ಶ್ರೀ ಅಡ್ಡಂಡ ಕಾರ್ಯಪ್ಪ ಹಾಗೂ ಶ್ರೀಮತಿ ಅನಿತಾ ಕಾರ್ಯಪ್ಪ.


23.02.2024

ಬೆಂಗಳೂರಿನ ಶ್ರೀ ಭವತಾರಿಣಿ ಆಶ್ರಮದ ಸಾಧ್ವಿ ಮಾತಾ ವಿವೇಕಮಯಿ, ಹುತಾತ್ಮ ವೀರಯೋಧ ಕ್ಯಾ. ಎಂ.ವಿ ಪ್ರಾಂಜಲ್ ಅವರ ತಂದೆ ಶ್ರೀ ವೆಂಕಟೇಶ್, ತಾಯಿ ಶ್ರೀಮತಿ ಕೆ.ಆರ್. ಅನುರಾಧ ವೆಂಕಟೇಶ್, ವರ್ಷ ಮಂಗಳೂರು, ಲಕ್ಷ್ಮೀ ಬ್ರಹ್ಮಚಾರಿಣೀ.


24.02.2024

ಕೊಂಡೆವೂರಿನ ಶ್ರೀ ನಿತ್ಯಾನಂದ ಯೋಗಾಶ್ರಮದ ಪರಮಪೂಜ್ಯ ಶ್ರೀ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಶ್ರೀರಾಮ ವಿದ್ಯಾಕೇಂದ್ರಕ್ಕೆ ಭೇಟಿ ನೀಡಿ ಚಟುವಟಿಕೆಯನ್ನು ವೀಕ್ಷಿಸಿದರು.



## ಶ್ರೀರಾಮ ಮಂದಿರದಲ್ಲಿ ವಿದ್ಯಾರ್ಥಿಗಳಿಂದ ಸರಸ್ವತಿ ಪೂಜೆ


21.02.2024



**ರಂಗಮಂಚ 10.02.2024:**

ಶಿಶುಮಂದಿರದ ಶಬರಿ ತರಗತಿಯ ಪುಟಾಣಿಗಳಿಂದ ರಂಗಮಂಚ ವೇದಿಕೆಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು.



11.2.2024ರಂದು ಶ್ರೀ ಗಣೇಶ ಶಿಶುಮಂದಿರದ ಮಾತೆಯರ ಪ್ರವಾಸವನ್ನು ಸಿರಿಮನೆ ಫಾಲ್ಸ್, ಶೃಂಗೇರಿ, ಹೊರನಾಡು, ಕಳಸ, ಸಂಸೆ ಈ ಸ್ಥಳಗಳಿಗೆ ಹಮ್ಮಿಕೊಳ್ಳಲಾಯಿತು. ಒಟ್ಟು 52ಮಂದಿ ಉಪಸ್ಥಿತರಿದ್ದರು.



ಸಾಮೂಹಿಕ ಹುಟ್ಟುಹಬ್ಬ 3.2.2024 ಜನವರಿ ತಿಂಗಳಲ್ಲಿ ಹುಟ್ಟಿದ ಮಕ್ಕಳ ಸಾಮೂಹಿಕ ಹುಟ್ಟುಹಬ್ಬ ಆಚರಣೆಯಲ್ಲಿ ಶ್ರೀಮತಿ ಸುಧಾ ಭಟ್, ನಿವೃತ್ತ ಅಧ್ಯಾಪಕರು, ಶ್ರೀ ನಾರಾಯಣ ಗೌಡ ಮತ್ತು ದಂಪತಿ ಹಾಗೂ ಪುತ್ರಿ ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು.



ಶ್ರೀರಾಮ ಶಿಶುಮಂದಿರದ ವಾರ್ಷಿಕ ಪ್ರವಾಸ 04.02.2024 ಶೃಂಗೇರಿ, ಹೊರನಾಡು, ಕಳಸಕ್ಕೆ ಏರ್ಪಡಿಸಲಾಗಿತ್ತು. ಒಟ್ಟು 74 ಜನ ಭಾಗವಹಿಸಿದ್ದರು.



ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಪಾಲಕರ ವಾರ್ಷಿಕ ಪ್ರವಾಸ 11.2.2024ರಂದು ಶೃಂಗೇರಿ, ಹೊರನಾಡು, ಕಲಸ, ಸಂಸೆ ಸ್ಥಳಗಳಿಗೆ ಹಮ್ಮಿಕೊಳ್ಳಲಾಯಿತು.

## ಪ್ರಾಥಮಿಕ ಶಾಲೆ



**ಕಾಡುಗಳು: ನಮ್ಮ ಜೀವನಾಡಿ 15.2.2024 :**

7ನೇ ತರಗತಿಯ ವಿಜ್ಞಾನ ಪಾಠ, ಕಾಡುಗಳು: ನಮ್ಮ ಜೀವನಾಡಿ ಪಾಠಕ್ಕೆ ಪೂರಕವಾಗಿ ವಿದ್ಯಾರ್ಥಿಗಳು ಮುಖ್ಯೋಪಾಧ್ಯಾಯರೊಂದಿಗೆ ಕಾಡನ್ನು ವೀಕ್ಷಿಸಿ, ಪರಿಸರವನ್ನು ಅರಿತು ಅದರೊಂದಿಗೆ ಬೆರೆತು ಆನಂದಿಸಿದರು.



**ಕೆಡ್ಡಸ ಆಚರಣೆ 13.2.2024 :**

ಪ್ರಕೃತಿ ಮಾತೆಯಾದ ಭೂಮಿದೇವಿಯನ್ನು ಪೂಜಿಸುವ ಕೆಡ್ಡಸ ಹಬ್ಬದ ಮಹತ್ವವನ್ನು ಅಧ್ಯಾಪಕರಾದ ಶ್ರೀಮತಿ ಶ್ವೇತಾ ಕೆ ತಿಳಿಸಿಕೊಟ್ಟರು.



**ರಥಸಪ್ತಮಿ 16.2.2024**

ರಥಸಪ್ತಮಿ ಅಂಗವಾಗಿ ವಿದ್ಯಾರ್ಥಿಗಳು ತರಗತಿವಾರು ಸೂರ್ಯನಮಸ್ಕಾರ ಮಾಡಿ ನಂತರ ರಥಸಪ್ತಮಿಯ ಮಹತ್ವವನ್ನು ಅಧ್ಯಾಪಕರಾದ ಶ್ರೀ ಸುಮಂತ್ ಆಳ್ವ ತಿಳಿಸಿದರು.



**ವಿವಿಧ ಸ್ಪರ್ಧೆಗಳು 17.2.2024 :**

ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಪ್ರಯುಕ್ತ, ಗಣಿತವಿಜ್ಞಾನ ಮತ್ತು ಸಂಸ್ಕೃತಿಜ್ಞಾನ ರಸಪ್ರಶ್ನೆ, ರಂಗೋಲಿ ಸ್ಪರ್ಧೆ, ಭಿತ್ತಿ ಚಿತ್ರ ರಚನೆ, ಗಣಿತ ವಿಜ್ಞಾನ ಮಾದರಿ ತಯಾರಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ತೀರ್ಪುಗಾರರಾಗಿ ಪಿ.ಯು.ಸಿಯಉಪನ್ಯಾಸಕರಾದ ಶ್ರೀಮತಿ ಶೈಲಿನಿ ಹಾಗೂ ಶ್ರೀಮತಿ ನಂದಾ ಭಾಗವಹಿಸಿದರು.



**ಶೈಕ್ಷಣಿಕ ಪರಿವೀಕ್ಷಕರ ಭೇಟಿ 26.2.2024 :**

ವಿವೇಕಾನಂದ ವಿದ್ಯಾವರ್ಧಕ ಸಂಘದ ಶೈಕ್ಷಣಿಕ ಪರಿವೀಕ್ಷಕರಾದ ಕೆದಿಲ ಶ್ರೀ ಸುಬ್ರಹ್ಮಣ್ಯ ಭಟ್ ಹಾಗೂ ರಘುರಾಜ್ ಉಬರಡ್ಕ ಪ್ರಾಥಮಿಕ ವಿಭಾಗಕ್ಕೆ ಭೇಟಿ ನೀಡಿ ಅಧ್ಯಾಪಕರ ಬೋಧನಾ ವಿಧಾನವನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಶ್ರೀ ಚೆನ್ನಪ್ಪ ಆರ್ ಕೋಟ್ಯಾನ್ ಉಪಸ್ಥಿತರಿದ್ದರು.



**ಭಜನಾ ಕಾರ್ಯಕ್ರಮ 21.2.2024**

ಕಲ್ಲಡ್ಕ ಶ್ರೀರಾಮ ಮಂದಿರದದಲ್ಲಿ ಶ್ರೀ ವಿದ್ಯಾಗಣಪತಿ ದೇವರ ಪ್ರಾಣಪ್ರತಿಷ್ಠೆ ಮತ್ತು ರಾಮಾಂಗಣದ ಲೋಕಾರ್ಪಣೆ ಕಾರ್ಯಕ್ರಮ ಹಾಗೂ ಮಂದಿರದ ಶತಾಬ್ದಿ ಸಂಭ್ರಮದ ನಿಮಿತ್ತ ಪ್ರಾಥಮಿಕ ವಿಭಾಗದ ವಿದ್ಯಾರ್ಥಿಗಳ ತಂಡ ಭಜನಾ ಕಾರ್ಯಕ್ರಮ ನೀಡಿದರು.

## ಸುಭಾಷಿತ ಮಂಜರಿ

ಯತ್ ಕೃತ್ವಾ ನ ಭವೇದ್ಧರ್ಮೋ
ನ ಕೀರ್ತಿರ್ನ ಯಶೋ ಭುವಿ ।
ಶರೀರಸ್ಯ ಭವೇತ್ ಖೇದಃ
ಕಸ್ತತ್ ಕರ್ಮ ಸಮಾಚರೇತ್ ॥

ಯಾವುದನ್ನಾಚರಿಸಿದರೆ ಧರ್ಮವಿಲ್ಲವೋ ಕೀರ್ತಿ ಇಲ್ಲವೋ ಒಳ್ಳೆಯ ಹೆಸರಿಲ್ಲವೋ, ದೇಹಕ್ಕೆ ಆಯಾಸ ಮಾತ್ರ ಆಗುವುದೋ ಅಂಥ ಕಾರ್ಯವನ್ನು ಯಾವನು ಮಾಡಿಯಾನು?

### ಸಂಪಾದಕೀಯ

ಕರ್ನಾಟಕ ಮಹಾರಾಷ್ಟ್ರದ ಗಡಿಭಾಗದಲ್ಲಿ ಶಿಕ್ಷಣಕ್ಕೆ ವಿಶೇಷವಾದ ಗಮನ ನೀಡಿ ಆಧುನಿಕ ಮತ್ತು ಪ್ರಾಚೀನ ವಿದ್ಯೆಗಳೆರಡನ್ನು ಸಮನ್ವಯಗೊಳಿಸಿದ ಸಂತ ಶ್ರೇಷ್ಠ ಕನ್ಹೇರಿ ಮಠದ ಅದೃಶ್ಯ ಕಾಡ ಸಿದ್ದೇಶ್ವರ ಶ್ರೀಗಳು ಹಾಗೂ ಕೇರಳ ಕರ್ನಾಟಕ ಗಡಿಭಾಗದಲ್ಲಿ ಸವಾಲುಗಳ ಮಧ್ಯೆ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿ ನಿಲ್ಲಿಸಿದ ಕೊಂಡೆವೂರು ಯೋಗಾನಂದ ಸರಸ್ವತೀ ಶ್ರೀಗಳು ಮತ್ತು ಇತ್ತೀಚೆಗಷ್ಟೇ ಹುತಾತ್ಮನಾದ ಕ್ಯಾಪ್ಟನ್ ಪ್ರಾಂಜಲ್‌ನ ಹೆತ್ತವರು ಹಾಗೂ ರಂಗಭೂಮಿಯಲ್ಲಿ ರಾಷ್ಟ್ರೀಯ ವಿಚಾರ ಧಾರೆಗೆ ಒತ್ತು ನೀಡಿದ ಅಡ್ಡಂಡ ಕಾರ್ಯಪ್ಪ ದಂಪತಿಗಳು ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಮೆಚ್ಚಿ ಪ್ರಭಾವಿತರಾಗಿ ಇಲ್ಲಿಂದ ಕಲಿಯುವುದು ಸಾಕಷ್ಟಿದೆ ಎಂಬ ಹೇಳಿಕೆ ನೀಡಿದ್ದು, ನಮ್ಮ ಕಾರ್ಯಕ್ಕೆ ದೊರೆತ ಪುರಸ್ಕಾರ ಎನ್ನಬಹುದು. ಜೊತೆಗೆ ಶಾಲೆ ಆರಂಭವಾದ ಕಲ್ಲಡ್ಕದ ಶ್ರೀರಾಮ ಮಂದಿರದ 100ನೇ ವರ್ಷಾಚರಣೆ ಅಂಗವಾಗಿ ನಡೆದ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯೂ ಒಂದು ಸ್ಮರಣೀಯ ಕ್ಷಣ. ಈ ಎಲ್ಲಾ ವರದಿಗಳೊಂದಿಗೆ ಈ ಬಾರಿಯ ಸರಯೂ ಪ್ರಕಟಗೊಂಡಿದೆ.

ವಂದನೆಗಳೊಂದಿಗೆ

ಸಂಪಾದಕ ಬಳಗ


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪ್ರೀತಿಕಾ (ಶಿಶುಮಂದಿರ)
ಚೈತ್ರಾ (ಪ್ರಾಥಮಿಕ ಶಾಲೆ)
ಮೇಘಶ್ರೀ (ಪ್ರೌಢಶಾಲೆ)
ರಮೇಶ್ (ಪಿಯುಸಿ)
ರಮ್ಯ (ಸೆಕೆಂಡರಿ ಸ್ಕೂಲ್)
ಸಂಧ್ಯಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


### ಹೊರೆಕಾಣಿಕೆ



ಶ್ರೀರಾಮ ಮಂದಿರದ ಶತಾಬ್ದಿ ಸಂಭ್ರಮದ ಪ್ರಯುಕ್ತ ಶ್ರೀರಾಮ ಶಿಶುಮಂದಿರ ಮತ್ತು ಅಕ್ಕ ಮಹಾದೇವಿ ಶಿಶುಮಂದಿರದಿಂದ ಹೊರೆಕಾಣಿಕೆ ಸಂಗ್ರಹಿಸಲಾಯಿತು. ಹಾಗೂ ಸರಸ್ವತಿ ಪೂಜೆಯಲ್ಲಿ ಮಕ್ಕಳು ಭಾಗವಹಿಸಿದರು.

### ನಳಂದ ಶಿಶುಮಂದಿರದಿಂದ ಭೇಟಿ 13.2.24

ಶ್ರೀರಾಮ ಶಿಶುಮಂದಿರಕ್ಕೆ ವಿವೇಕಾನಂದ ನಳಂದ ಶಿಶುಮಂದಿರದ ಮಕ್ಕಳು ಹಾಗೂ ಪಾಲಕರು ಭೇಟಿ ನೀಡಿ ಶಿಶುಮಂದಿರದಲ್ಲಿ ನಡೆಯುವ ಎಲ್ಲ ಚಟುವಟಿಕೆಗಳನ್ನು ವೀಕ್ಷಿಸಿ ಸಾಮೂಹಿಕ ಶ್ರೀರಾಮ ತಾರಕ ಜಪದಲ್ಲಿ ಭಾಗವಹಿಸಿದರು.

### ರಥಸಪ್ತಮಿ 16.02.2024



ಶಿಶುಮಂದಿರದ ಮಕ್ಕಳಿಂದ ರಥಸಪ್ತಮಿ ಪ್ರಯುಕ್ತ ಸೂರ್ಯನಮಸ್ಕಾರ ನಡೆಯಿತು. ಶಿಶುಮಂದಿರದ ಮುಖ್ಯ ಮಾತಾಜಿಯಾದ ಶ್ರೀಮತಿ ಶೋಭಾ ಮಾತಾಜಿ ರಥಸಪ್ತಮಿಯ ಮಹತ್ವವನ್ನು ತಿಳಿಸಿದರು

### ಕುಂಕುಮಾರ್ಚನೆ 23.02.2024

ಕಲ್ಲಡ್ಕ ಶ್ರೀರಾಮ ಮಂದಿರದ ಶತಾಬ್ದಿ ಕಾರ್ಯಕ್ರಮದ ನಿಮಿತ್ತ ನಡೆದ ಕುಂಕುಮಾರ್ಚನೆಯಲ್ಲಿ ಶಿಶುಮಂದಿರದ ಮಕ್ಕಳ ಮಾತೆಯರು ಮತ್ತು ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಇಲ್ಲಿನ ಮಾತೆಯರು ಭಾಗವಹಿಸಿದ್ದರು.

### ಪೇಪರ್ ಬೋಟ್ 8.2.2024 :



5ನೇ ತರಗತಿಯ ಇಂಗ್ಲೀಷ್ ಪಾಠಕ್ಕೆ ಸಂಬಂಧಿಸಿದಂತೆ 5ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳು ಕಾಗದದಲ್ಲಿ ಮಾಡಿದ ದೋಣಿಯಲ್ಲಿ ತಮ್ಮ ಹೆಸರು ವಿಳಾಸ ಬರೆದು ನೀರಿನಲ್ಲಿ ಹರಿಯಬಿಟ್ಟು ಸಂಭ್ರಮಿಸಿದರು.

### ಪಿ.ಯು.ಸಿ ಉಪನ್ಯಾಸಕರ ಭೇಟಿ 17.2.2024



ಪ್ರಾಥಮಿಕ ವಿಭಾಗಕ್ಕೆ ಶ್ರೀರಾಮ ಪಿ.ಯು.ಸಿ ಯ ಅಧ್ಯಾಪಕರು ಭೇಟಿ ನೀಡಿ, ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಪ್ರಯುಕ್ತ ನಡೆದ ಗಣಿತ–ವಿಜ್ಞಾನ ಮಾದರಿಯನ್ನು ವೀಕ್ಷಿಸಿದರು.

### ಹೊರೆಕಾಣಿಕೆ ಸಂಗ್ರಹ 20–21 :

ಸರಸ್ವತಿ ಪೂಜೆ ಹಾಗೂ ಶ್ರೀರಾಮ ಮಂದಿರದ ಶತಾಬ್ದಿ ಸಂಭ್ರಮಕ್ಕೆ ವಿದ್ಯಾರ್ಥಿಗಳು ಹಸಿರುವಾಣಿಯನ್ನು ಸಮರ್ಪಿಸಿದರು.

### ಕುಂಕುಮಾರ್ಚನೆಯಲ್ಲಿ ಭಾಗಿ 23.2.24

ಕಲ್ಲಡ್ಕ ಶ್ರೀರಾಮ ಮಂದಿರದಲ್ಲಿ ಶತಾಬ್ದಿ ಸಂಭ್ರಮದ ಪ್ರಯುಕ್ತ ನಡೆದ ಸಾಮೂಹಿಕ ಕುಂಕುಮಾರ್ಚನೆಯಲ್ಲಿ ಶ್ರೀರಾಮ ಪ್ರಾಥಮಿಕ ವಿಭಾಗದ 7ನೇ ತರಗತಿಯ ವಿದ್ಯಾರ್ಥಿನಿಯರು ಭಾಗವಹಿಸಿದರು.

### ಅಧ್ಯಾಪಕರ ಬೈಠಕ್ 26.2.2024

ವಿವೇಕಾನಂದ ವಿದ್ಯಾವರ್ಧಕ ಸಂಘದ ಶೈಕ್ಷಣಿಕ ಪರಿವೀಕ್ಷಕರೊಂದಿಗೆ ಅಧ್ಯಾಪಕರ ಬೈಠಕ್ ನಡೆಯಿತು. ಈ ಸಂದರ್ಭದಲ್ಲಿ ಶಾಲಾ ಸಂಚಾಲಕರಾದ ಶ್ರೀ ವಸಂತ ಮಾಧವ, ಪ್ರಾಥಮಿಕ ವಿಭಾಗದ ಶೈಕ್ಷಣಿಕ ಪರಿವೀಕ್ಷಕರಾದ ಮಲ್ಲಿಕಾ ಆರ್ ಶೆಟ್ಟಿ ಹಾಗೂ ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು.

**ಶ್ರೀರಾಮ ಪ್ರಾಥಮಿಕ ಶಾಲೆಗೆ ಭೇಟಿ 2.2.24**



ಶ್ರೀರಾಮ ಪ್ರೌಢಶಾಲೆಗೆ ಮುಂದಿನ ಶೈಕ್ಷಣಿಕ ವರ್ಷದ ಎಂಟನೇ ತರಗತಿಗೆ ವಿದ್ಯಾರ್ಥಿಗಳನ್ನು ಮಾತಾಡಿಸುವ ಸಲುವಾಗಿ 10 ಮಂದಿ ಅಧ್ಯಾಪಕರು ಶ್ರೀರಾಮ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದರು. ಐದು ತರಗತಿಯಲ್ಲಿರುವ 215 ವಿದ್ಯಾರ್ಥಿಗಳನ್ನು ಮಾತಾಡಿಸಲಾಯಿತು. ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಮತ್ತು ಆಟಗಳನ್ನು ಆಡಿಸಿ ಬಹುಮಾನ ನೀಡಿ ಎಲ್ಲಾ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಯಿತು.

**ಶಾಲೆಗಳಿಗೆ ಬೇಟಿ 08.02.2024**



ಮುಂದಿನ ಶೈಕ್ಷಣಿಕ ವರ್ಷಕ್ಕೆ 8, ಮತ್ತು 9ನೇ ತರಗತಿಯ ವಿದ್ಯಾರ್ಥಿಗಳನ್ನು ಮಾತನಾಡಿಸಲು ವಿವಿಧ ಶಾಲೆಗಳಿಗೆ ಭೇಟಿ. (ಬ್ರಹ್ಮರ ಕೂಟ್ಲು, ತುಂಬೆ ಕೋಡಪದವು, ಮಾಣಿ ಅನಂತಾಡಿ)

**ಮೆಚ್ಚುಗೆ ಪ್ರಶಸ್ತಿ. 10.02.2024**



ಉದಯವಾಣಿಯ ಸಾಮಾನ್ಯ ಜ್ಞಾನ ಪರೀಕ್ಷೆಯಲ್ಲಿ ಮೆಚ್ಚುಗೆ ಪ್ರಶಸ್ತಿಯನ್ನು ಪಡೆದ ಭೂಷಣ್

**ಶ್ರೀರಾಮವನ ಸ್ವಚ್ಛತೆ ಮತ್ತು ಶ್ರಮಸೇವೆ10.2.24**



ಶ್ರೀರಾಮ ಪ್ರೌಢಶಾಲೆ ಗಮನಿಸುವ ಗ್ರಾಮ ವಿಕಾಸ ಗ್ರಾಮವಾದ ಗೋಳ್ತಮಜಲು ಗ್ರಾಮದ ಶ್ರೀರಾಮವನದಲ್ಲಿ ಶಿಕ್ಷಕರೊಂದಿಗೆ ವಿದ್ಯಾರ್ಥಿಗಳು ಸ್ವಚ್ಛತೆ ಮತ್ತು ಶ್ರಮದಾನ ಮಾಡಿದರು.

**ATL Marathon 2023-24 10.02.2024**

ಶ್ರೀರಾಮ ಪದವಿ ಪೂರ್ವ ವಿಭಾಗದ ಪ್ರಾಂಶುಪಾಲರಾದ ಶ್ರೀಯುತ ವಸಂತ ಬಲ್ಲಾಳ್ ಶ್ರೀಮಾನ್ 'ATL Marathon 2023–24'ಸಾಲಿನ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರವನ್ನು ವಿತರಿಸಿದರು.

**ಸರಸ್ವತಿ ಪೂಜೆ 21.02.2024**

ಈ ಬಾರಿಯ ಸರಸ್ವತಿ ಪೂಜೆ–ಯು ಶ್ರೀರಾಮ ಮಂದಿರದಲ್ಲಿ ನಡೆದಿದ್ದು ಶ್ರೀರಾಮ ಪ್ರೌಢಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದರು.

**ಭಜನಾ ಕಾರ್ಯಕ್ರಮ 24.02.2024**




ಶ್ರೀರಾಮ ಮಂದಿರದ ಶತಾಬ್ದಿ ಕಾರ್ಯಕ್ರಮ ನಿಮಿತ್ತ ಶ್ರೀರಾಮ ಪ್ರೌಢಶಾಲಾ ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮ.

## ಸೆಕೆಂಡರಿ ಸ್ಕೂಲ್

**ಪ್ರತಿಭಾ ಪುರಸ್ಕಾರ ಕಾರ್ಯಕ್ರಮ 02.01.2024**

2023–2024 ನೇ ಶೈಕ್ಷಣಿಕ ವರ್ಷದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ವಿಶ್ವ ವಿಭಾಗ ಸಂಯೋಜಕ ಶ್ರೀಸೌಮಿತ್ರ ಗೋಖಲೆ ಇವರು ಭಾಗವಹಿಸಿದರು. ಹಾಗೆಯೇ ಕಾರ್ಯಕ್ರಮದಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ನಾಗೇಶ್ ಕಲ್ಲಡ್ಕ ಹಾಗು ಮಾತೃ ಭಾರತಿಯ ಅಧ್ಯಕ್ಷರು ಮತ್ತುಕಾರ್ಯದರ್ಶಿ ಮತ್ತು ಶ್ರೀ ರಾಮ ಸೆಕೆ–ಂಡರಿ ಸ್ಕೂಲ್‌ನ ಉಪಪ್ರಾಂಶುಪಾಲರಾದ ಶ್ರೀತಿರುಮಲೇಶ್ವರ ಪ್ರಶಾಂತ್ ಇವರು ಉಪಸ್ಥಿತರಿದ್ದರು.

**10ನೇ ತರಗತಿಯ ಶೈಕ್ಷಣಿಕ ಪ್ರವಾಸ**

3 ದಿನಗಳ ಕಾಲ ನಡೆದ ಶೈಕ್ಷಣಿಕ ಪ್ರವಾಸದಲ್ಲಿ ಮೈಸೂರು ಅರಮನೆ, ಚಾಮುಂಡಿ ಬೆಟ್ಟ, ಮೃಗಾಲಯ, ತಲಕಾಡು, ಶಿವನಸಮುದ್ರ, ಚೆನ್ನಕೇಶವ ದೇವಾಲಯವನ್ನು ಸಂದರ್ಶಿಸಲಾಯಿತು.

**ಹೊರಕಾಣಿಕೆ 21/02/2024**



ಶ್ರೀರಾಮ ಮಂದಿರದ ಶತಾಬ್ದಿ ಸಂಭ್ರಮಕ್ಕಾಗಿ ಶ್ರೀ ರಾಮ ಸೆಕೆಂಡರಿ ಸ್ಕೂಲ್‌ನ 9ನೇ ಮತ್ತು 10 ನೇ ತರಗತಿ ವಿದ್ಯಾರ್ಥಿಗಳಿಂದ ಹೊರೆಕಾಣಿಕೆಯನ್ನು ಸಂಗ್ರಹಿಸಲಾಯಿತು. ಸಂಗ್ರಹಿಸಿದ ಹೊರಕಾಣಿಕೆಯನ್ನು ಅದೇ ದಿನ ಸಂಜೆ 4.00ಗಂಟೆಗೆ ಮೇರವಣಿಗೆಯ ಮೂಲಕ ಶ್ರೀರಾಮ ಮಂದಿರ ಕಲ್ಲಡ್ಕಕ್ಕೆ ತಲುಪಿಸಲಾಯಿತು.

**ಸರಸ್ವತಿ ಪೂಜೆ 21/02/2024**

ಶ್ರೀರಾಮ ಮಂದಿರದಲ್ಲಿ ನಡೆದ ಸರಸ್ವತಿ ಪೂಜೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಶಿಕ್ಷಕೇತರರು ಭಾಗವಹಿಸಿದ್ದರು.

**ಶಾಲಾ ಭೇಟಿ 12.2.24 ಮತ್ತು 13.2.24**



ಮುಂದಿನ ಶೈಕ್ಷಣಿಕ ವರ್ಷದ ದಾಖಲಾತಿಗೆ 8ನೇ ತರಗತಿಯ ವಿದ್ಯಾರ್ಥಿಗಳನ್ನು ಮಾತನಾಡಿಸಲು 12/02/2024 ಮತ್ತು 13/02/2024 ರಂದು ಶ್ರೀ ರಾಮ ಪ್ರೌಡಶಾಲೆ ಕಲ್ಲಡ್ಕ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕೆದಿಲ ಮತ್ತು ಬಾಳ್ತಿಲ, ಅನಂತಾಡಿ ಶಾಲೆಗಳಿಗೆ ಭೇಟಿ ನೀಡಲಾಯಿತು.

## ಪದವಿಪೂರ್ವ

**ಪ್ರೌಢಶಾಲಾ ಭೇಟಿ 2024**

ದಿನಾಂಕ 05/02/2024.ಸೋಮವಾರದಂದು ಪ್ರಗತಿ ಹೈಸ್ಕೂಲ್ ಮಂಚಿ ಕುಕ್ಕಾಜೆ, ಸರಕಾರಿ ಪ್ರೌಢ ಶಾಲೆ ಮಂಚಿ,ಸರಕಾರಿ ಪ್ರೌಢ ಶಾಲೆ ಕಾಡುಮಠ, ಸತ್ಯಸಾಯಿ ಹೈಸ್ಕೂಲ್ ಬಾಲಕ, ಬಾಲಕಿಯರು ಅಳಿಕೆ, ಇಲ್ಲಿಗೆ ತೆರಳಿ ಶ್ರೀರಾಮ ಪದವಿಪೂರ್ವ ಕಾಲೇಜಿನ ಮಾಹಿತಿಯನ್ನು ಉಪನ್ಯಾಸಕರಾದ ಅಶೋಕ್ ಕುಮಾರ್ ನೀಡಿದರು,ಉಪನ್ಯಾಸಕರಾದ ಮಹೇಂದ್ರ ಮಂಜುನಾಥ್ ಭಟ್ ಸಹಕರಿಸಿದರು.

ದಿನಾಂಕ: 06.02.2024. ಮಂಗಳವಾರದಂದು ಗುರುದೇವ ವಿದ್ಯಾಪೀಠ ಒಡಿಯೂರು, ಸರಸ್ವತಿ ಹೈಸ್ಕೂಲ್ ಕನ್ಯಾನ, ಸರಕಾರಿ ಪ್ರೌಢ ಶಾಲೆ ಕೇಪು ಕಲ್ಲಂಗಳ, ಸರಕಾರಿ ಪ್ರೌಢ ಶಾಲೆ ಬೊಳಂತಿಮೊಗೆರು. ಇಲ್ಲಿಗೆ ತೆರಳಿ ಶ್ರೀರಾಮ ಪದವಿಪೂರ್ವ ಕಾಲೇಜಿನ ಮಾಹಿತಿಯನ್ನು ಉಪನ್ಯಾಸಕರಾದ ಅಶೋಕ್ ಕುಮಾರ್ ನೀಡಿದರು. ಉಪನ್ಯಾಸಕರಾದ ಮಹೇಂದ್ರ ಮಂಜುನಾಥ್ ಭಟ್ ಸಹಕರಿಸಿದರು.

ದಿನಾಂಕ: 08.02.2024. ಗುರುವಾರದಂದು ಬೊಂಡಾಲ ಜಗನ್ನಾಥ ಶೆಟ್ಟಿ ಸ್ಮಾರಕ ಸರಕಾರಿ ಪ್ರೌಢಶಾಲೆ ಶಂಭೂರು ಇಲ್ಲಿಗೆ ತೆರಳಿ ಶ್ರೀ ರಾಮ ಪದವಿಪೂರ್ವ ಕಾಲೇಜಿನ ಮಾಹಿತಿಯನ್ನು ಉಪನ್ಯಾಸಕರಾದ ದಿನೇಶ್ ಮತ್ತು ಅಶೋಕ್ ಕುಮಾರ್ ನೀಡಿ-ದರು.



ದಿನಾಂಕ: 24/02/2024. ರಂದು ಸರಕಾರಿ ಪ್ರೌಢಶಾಲೆ ಕೊಡ್ಮಣ್, ನಿತ್ಯಸಹಾಯಮಾತ ಪ್ರೌಢಶಾಲೆ ಮೇರೆಮಜಲು, ಶ್ರೀರಾಮ ಪ್ರೌಢ ಶಾಲೆ ಫರಂಗಿಪೇಟೆ ಇಲ್ಲಿಗೆ ತೆರಳಿ ಶ್ರೀರಾಮ ಪದವಿಪೂರ್ವ ಕಾಲೇಜಿನ ಮಾಹಿತಿಯನ್ನು ಉಪನ್ಯಾಸಕಿಯಾದ ಕು. ನಯನಾ ನೀಡಿ-ದರು.

ದಿನಾಂಕ: 26/02/2024.ರಂದು ಶಾರದಾ ಪ್ರೌಢಶಾಲೆ ಪಾಣೆಮಂಗಳೂರು, S.L.N.P. ಹೈಸ್ಕೂಲ್ ಪಾಣೆಮಂಗಳೂರು, ಸರಕಾರಿ ಪ್ರೌಢ ಶಾಲೆ ಕೊಯಿಲ ಇಲ್ಲಿಗೆ ತೆರಳಿ ಶ್ರೀರಾಮ ಪದವಿಪೂರ್ವ ಕಾಲೇಜಿನ ಮಾಹಿತಿಯನ್ನು ಉಪನ್ಯಾಸಕರಾದ ಅಶೋಕ್ ಕುಮಾರ್ ನೀಡಿದರು. ದೈಹಿಕ ಶಿಕ್ಷಣ ನಿರ್ದೇಶಕರಾದ ಪ್ರಶಾಂತ್ ಸಹಕರಿಸಿದರು.

ದಿನಾಂಕ: 28/02/2024. ಬುಧವಾರದಂದು ಶ್ರೀ ಭಾರತೀ ವಿದ್ಯಾಪೀಠ ಬದಿಯಡ್ಕ ಇಲ್ಲಿಗೆ ತೆರಳಿ ಶ್ರೀರಾಮ ಪದವಿಪೂರ್ವ ಕಾಲೇಜಿನ ಮಾಹಿತಿಯನ್ನು ಉಪನ್ಯಾಸಕರಾದ ಅಶೋಕ್ ಕುಮಾರ್ ನೀಡಿದರು.

**ಶ್ರೀ ವಿದ್ಯಾ ಗಣಪತಿ ದೇವರ ಶಿಲಾನ್ಯಾಸ ಕಾರ್ಯಕ್ರಮ**

ಕಲ್ಲಡ್ಕ ಶ್ರೀರಾಮ ಮಂದಿರದಲ್ಲಿ ಶ್ರೀ ವಿದ್ಯಾ ಗಣಪತಿ ದೇವರ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಪದವಿ ಪೂರ್ವ ವಿದ್ಯಾಲಯದ ವಿದ್ಯಾರ್ಥಿಗಳು ಪಾಲ್ಗೊಂಡು ಶ್ರೀ ದೇವರಿಗೆ ಹಾಲಾಭಿಷೇಕ ಮಾಡಿ ಪ್ರಾರ್ಥನೆ ಸಲ್ಲಿಸಿದರು, ಶ್ರೀ ರಾಮ ಮಂದಿರದ ಸಭಾ ಕಾರ್ಯಕ್ರಮ ಮತ್ತು ಶ್ರೀ ರಾಮ ವಿದ್ಯಾ ಕೇಂದ್ರದಲ್ಲಿ ಅವಧೂತ ಶ್ರೀ ವಿನಯ್ ಗುರೂಜಿ ಭಾಗವಹಿಸಿದ ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

**ಹೊರೆ ಕಾಣಿಕೆ**



ದಿನಾಂಕ 21.02.2024 ರಂದು ಶ್ರೀರಾಮ ಮಂದಿರದ ಶತಾಬ್ದಿ ಕಾರ್ಯಕ್ರಮ ನಿಮಿತ್ತ ಪದವಿ ಪೂರ್ವ ವಿಭಾಗದ ವಿದ್ಯಾರ್ಥಿಗಳಿಂದ ಹೊರೆ ಕಾಣಿಕೆ ಸಂಗ್ರಹಿಸಲಾಯಿತು.

**ಭಜನಾ ಕಾರ್ಯಕ್ರಮ**

ದಿನಾಂಕ 22.02.2024 ರಂದು ಶ್ರೀರಾಮ ಮಂದಿರದ ಶತಾಬ್ದಿ ಕಾರ್ಯಕ್ರಮ ನಿಮಿತ್ತ ಶ್ರೀರಾಮ ಪದವಿ ಪೂರ್ವ ವಿಭಾಗದ ವಿದ್ಯಾರ್ಥಿಗಳು ಭಜನಾಕಾರ್ಯಕ್ರಮವನ್ನು ನಡೆಸಿಕೊಟ್ಟರು.

## ಪದವಿ

**ಕನಕದಾಸರ ಕೀರ್ತನೆಗಳ ಗಾಯನ ಸ್ಪರ್ಧೆಯಲ್ಲಿ ಭಾಗಿ 02.02.2024**



ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ಕನಕ ಕೀರ್ತನ ಗಂಗೋತ್ರಿ, ಕನಕದಾಸರ ಕೀರ್ತನೆಗಳ ಗಾಯನ ಸ್ಪರ್ಧೆಯಲ್ಲಿ ಪ್ರಥಮ ವಾಣಿಜ್ಯ ವಿಭಾಗದ ಶರಣ್ಯಶ್ರೀ ಇವರು ಭಾಗವಹಿಸಿರುತ್ತಾರೆ.

**ಪ್ರಾಧ್ಯಾಪಕ ಪ್ರಶಿಕ್ಷಣ ವರ್ಗದಲ್ಲಿ ಭಾಗಿ 03.02.2024 ರಿಂದ 07.02.2024ರವರೆಗೆ**




ಧಾರವಾಡದ ಕೃಷಿ ವಿಶ್ವ ವಿದ್ಯಾಲಯದ Staff Training Unitನಲ್ಲಿ ನಡೆದ 5 ದಿನಗಳ ಪ್ರಾಧ್ಯಾಪಕ ಪ್ರಶಿಕ್ಷಣ ವರ್ಗದಲ್ಲಿ ಶ್ರೀ ಕೃಷ್ಣಪ್ರಸಾದ ಕಾಯರ್‌ಕಟ್ಟೆ, (ಪ್ರಾಚಾರ್ಯ) ಶ್ರೀ ಧನಂಜಯ್ (ಇಂಗ್ಲೀಷ್ ಭಾಷಾ ಪ್ರಾಧ್ಯಾಪಕ) ಇವರು ಭಾಗವಹಿಸಿರುತ್ತಾರೆ. ಈ ಪ್ರಶಿಕ್ಷಣ ವರ್ಗವನ್ನು ಸಿಎಂಡಿಆರ್ ಹಾಗೂ ವಿದ್ಯಾಭಾರತಿ ಆಯೋಜಿಸಿತ್ತು. ದೇಶದ ವಿವಿಧ ವಿಶ್ವವಿದ್ಯಾಲಯಗಳ 22 ಪ್ರಾಧ್ಯಾಪಕರು ಸಂಪನ್ಮೂಲ ವ್ಯಕ್ತಿಗಳಾಗಿ ಮಾರ್ಗದರ್ಶನ ಮಾಡಿದರು.

**ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನೆ 11.02.2024**

ಸ್ವಾರ್ಥ ಸರಿಸಿ, ದೇಶ ಪ್ರೇಮ ಬೆಳೆಸಿ, ವ್ಯಕ್ತಿತ್ವ ವಿಕಸನವೇ ಶಿಬಿರದ ಮೂಲ ಉದ್ದೇಶ: ಸತೀಶ್ಚಂದ್ರ ಎಸ್. ಆರ್. ಇಂದು ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನೆಯು ಇಂದು ದುರ್ಗಾಪರಮೇಶ್ವರಿ ದೇವಸ್ಥಾನ ಮೊಂತಿಮರ್ ಅಲ್ಲಿ ನಡೆಯಿತು. ಶಿಬಿರದ ಉದ್ಘಾಟನೆಯನ್ನು ವಿಕಾಸ ಪುತ್ತೂರು ಇವರು ನಡೆಸಿಕೊಟ್ಟರು. ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಮೊಕ್ತೆಸ್ತರರು ಆಗಿರುವಂತಹ ಸತೀಶ್ಚಂದ್ರ ಎಸ್ ಆರ್ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ರಾಷ್ಟ್ರ ಜಾಗೃತಿ, ಹೊಂದಾಣಿಕೆಯ ಬದುಕು, ಶಿಬಿರದ ಉದ್ದೇಶ, ವಿಚಾರಗಳನ್ನ ತಿಳಿದು ಅಳವಡಿಸಿ ಕೊಳ್ಳುವ ಪ್ರಯತ್ನ ಶಿಬಿರದಲ್ಲಿ ಆಗಬೇಕು. ಆಗ ಮಾತ್ರ ಈ ತ್ಯಾಗಕ್ಕೆ ಒಂದು ಬೆಲೆ ಅಂದರು. ಶ್ರಮದಾನದ ಉದ್ಘಾಟನೆಯನ್ನು ಹಾಲು ಉತ್ಪಾದಕರ ಸಹಕಾರ ಸಂಘದ ಉಪಾಧ್ಯಕ್ಷ ಕೇಶವ ರಾವ್ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಸಹ ಸಂಚಾಲಕ ರಮೇಶ್, ಕೋಶಾಧಿಕಾರಿ ಸತೀಶ್ ಶಿವಗಿರಿ, ಸಾಮಾಜಿಕ ಕಾರ್ಯಕರ್ತ ಪತ್ತುಮುಡಿ ರಮೇಶ್ ರಾವ್ ಮಂಚಿ, ಅಂಬಿಕಾ ಮಿತ್ರ ಮಂಡಳಿ ಅಧ್ಯಕ್ಷ ದಿನೇಶ್ ಸಾಲಿಯಾನ್, ಮಂಚಿ ಯುವಕ ವೃಂದದ ಅಧ್ಯಕ್ಷರಾದ ಚಂದ್ರಶೇಖರ್

ನಾಯಕ್, ಮೊಂತಿಮಾರ್ ಶಾಲೆಯ ಮುಖ್ಯೋಪಾಧ್ಯಯರಾದ ಶ್ರೀಮತಿ ದೇವಕಿ ಉಪಸ್ಥಿತರಿದ್ದರು. ಪ್ರಾಂಶುಪಾಲ ಕೃಷ್ಣಪ್ರಸಾದ್‌ಕೆ ಪ್ರಾಸ್ತಾವಿಕ ಮಾತಗಳನ್ನಾಡಿದರು. ಯೋಜನಾಧಿಕಾರಿ ಯತಿರಾಜ್ ಪಿ ಸ್ವಾಗತಿಸಿ, ವಿದ್ಯಾರ್ಥಿನಿ ಆಶ್ರಿತ ವಂದಿಸಿದರು. ಮನ್ವಿತ ಕಾರ್ಯಕ್ರಮ ನಿರೂಪಿಸಿದರು

**ಶಿಬಿರದ ಸಮಾರೋಪ 17-02-2024**

ಸೇವಾ ಮನೋಭಾವ ಮಾನವತೆಯ ಸಂ-ಕೇತ: ಡಾ। ಪ್ರಭಾಕರ್ ಭಟ್ ಕಲ್ಲಡ್ಕ

ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಸಮಾರೋಪದಲ್ಲಿ ಮಾತನಾಡಿದ ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ಅಧ್ಯಕ್ಷರೂ, ಶ್ರೀರಾಮ ವಿದ್ಯಾಕೇಂದ್ರದ ಸಂಸ್ಥಾಪಕರು ಡಾ।ಪ್ರಭಾಕರ್ ಭಟ್ ಇವರು ಸೇವೆ ಎನ್ನುವುದು ಮಾನವತೆಯ ಸಂಕೇತ. ಮಾನವತೆಯ ಅರಿವು ಇದ್ದವನು ಯಾರಿಗೂ ನೋವು ಮಾಡಲಾರ. ಆತನು ಸಮಾಜದ ಉನ್ನತಿಗೆ ಸದಾ ಕಾಲ ದುಡಿಯುತ್ತಾ ಇರುತ್ತಾನೆ ಎಂದರು. ಕಾರ್ಯಕ್ರಮದಲ್ಲಿ ಸ್ಥಳೀಯರಾದ ಹಿರಿಯರಾದ ಜಯರಾಮ್ ಅಲ್ಕಿರು, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ನಿಶ್ಚಲ್ ಶೆಟ್ಟಿ, ಉದ್ಯಮಿ ಪ್ರಸೀನ್ ಶೆಟ್ಟಿ, ದೇವಿಪ್ರಸಾದ್ ಚೆಂಗಲ್ಪಾಡಿ, ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಆಡಳಿತ ಮಂಡಳಿ ಸದಸ್ಯ ಗಣೇಶ್ ಕಾಮತ್, ದೇವಸ್ಥಾನದ ವ್ಯವಸ್ಥಾಪಕರು ಕಿಯೋನಿಕ್ಸ್ ಸಂಸ್ಥೆಯ ಮಾಲಕ ಅಶೋಕ್ ನಾಯಕ್, ಲಯನ್ಸ್ ಕ್ಲಬ್ ಅಧ್ಯಕ್ಷೆ ರಮಾ ಜಿ ಆಚಾರ್, ಪಂಚಾಯತ್ ನ ಮಾಜಿ ಅಧ್ಯ-ಕ್ಷೆ ಪುಷ್ಪಕಾಮತ್, ಪ್ರಗತಿ ಪರ ಕೃಷಿಕರು ಕಟ್ಟೆ ಬಾಲಚಂದ್ರ , ಉದ್ಯಮಿ ಪ್ರಶಾಂತ ನಾಡಾಜೆ, ಪದವಿ ವಿಭಾಗದ ಪ್ರಾಚಾರ್ಯರಾದ ಕೃಷ್ಣ ಪ್ರಸಾದ್ KN, ಆಡಳಿತ ಮಂಡಳಿ ಸದಸ್ಯೆ ಲಕ್ಷ್ಮಿ ರಘುರಾಜ್, ಶಿಬಿರದ ಶಿಬಿರಾಧಿಕಾರಿ ಯತಿ-ರಾಜ್ ಪಿ, ಸಹ ಶಿಬಿರಾಧಿಕಾರಿ ದೀಕ್ಷಿತ, ಮತ್ತು ಧನಂಜಯ, ಉಪನ್ಯಾಸಕಿ ಶ್ರೀಮತಿ ವಿನುತ ಲಕ್ಷ್ಮಿ, ಶ್ರೀಮತಿ ಸಹನಾ ಉಪಸ್ಥಿತರಿದ್ದರು, ಕು.ಶರಣ್ಯ ವೈಯುಕ್ತಿಕ ಹಾಡು ಹಾಡಿ, ಶಶಾಂಕ್ ಸ್ವಾಗತಿಸಿ, ವಿಸ್ಮಿತ ವಂದಿಸಿದರು. ಕು. ಧನುಶ್ರೀ ಕಾರ್ಯಕ್ರಮ ನಿರೂಪಿಸಿದರು.

**ಸ್ವಚ್ಛತಾ ಕಾರ್ಯ 15-02-2024**




ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದಲ್ಲಿ ಶಿಬಿರಾರ್ಥಿಗಳು ಮೊಂತಿಮಾರ್ ದುರ್ಗಾ ಪರಮೇಶ್ವರಿ ದೇವಸ್ಥಾನದ ಪುಷ್ಕರಣಿಯನ್ನು ಸ್ವಚ್ಛಗೊಳಿಸಿರುವ ಚಿತ್ರಣ.

**ವರ್ಲಿ ಚಿತ್ರಕಲೆ 16-02-2024**




NSS ಶಿಬಿರದಲ್ಲಿ ಶಿಬಿರಾರ್ಥಿಗಳಿಂದ ಮೊಂತಿಮಾರ್ ದುರ್ಗಾ ಪರಮೇಶ್ವರಿ ದೇವಸ್ಥಾನದ ಕಾಂಪೌಂಡ್ ಗೋಡೆ ಯಲ್ಲಿ ವರ್ಲಿ ಚಿತ್ರಕಲೆ ಮೂಲಕ ಅಲಂಕಾರ ಎಲ್ಲರ ಗಮನ ಸೆಳೆಯಿತು

**ಹೊರೆಕಾಣಿಕೆ ಪದವಿ ವಿಭಾಗ 21.02.2024ರಿಂದ24.02.2024**




ತಾ. 21/02/2024ರಿಂದ 24/02/2024ರ ವರೆಗೆ ಕಲ್ಲಡ್ಕ ಶ್ರೀ ರಾಮ ಮಂದಿರದಲ್ಲಿ ನಡೆದ ಶ್ರೀ ವಿದ್ಯಾ ಗಣಪತಿ ಪ್ರತಿಷ್ಠೆ ಹಾಗೂ ಶತಾಬ್ದಿ ಸಂಭ್ರಮದ ಪ್ರಯುಕ್ತ ತಾ. 21/02/2024 ರಂದು ಶ್ರೀ ರಾಮ ಪದವಿ ಕಾಲೇಜಿನ ವಿದ್ಯಾರ್ಥಿಗಳು ಹೊರೆ ಕಾಣಿಕೆಯನ್ನು ಸಮರ್ಪಿಸಿದರು. ಅಕ್ಕಿ, ತೆಂಗಿನ ಕಾಯಿ, ಬೆಲ್ಲ, ಬಾಳೆ ಎಲೆ ಇತ್ಯಾದಿಗಳನ್ನು ಭಕ್ತಿಯಿಂದ ಸಮರ್ಪಿಸಿ ಹೊರೆಕಾಣಿಕೆಯ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಾಯಿತು

**ಸರಸ್ವತಿ ಪೂಜೆಯಲ್ಲಿ ಭಾಗಿ 21/02/2024**

ತಾ. 21/02/2024ರಂದು ಕಲ್ಲಡ್ಕ ಶ್ರೀ ರಾಮ ಮಂದಿರದಲ್ಲಿ ನಡೆದ ಸರಸ್ವತಿ ಪೂಜೆಯಲ್ಲಿ ಶ್ರೀ ರಾಮ ಪದವಿ ವಿಭಾಗದ ವಿದ್ಯಾರ್ಥಿ, ಶಿಕ್ಷಕ ಶಿಕ್ಷಕೇತರ ವೃಂದದವರು ಭಕ್ತಿ ಪೂರ್ವಕ ಪಾಲ್ಗೊಂಡರು. ಪದವಿ ವಿಭಾಗದ ಸಮಸ್ತರೂ ತನು-ಮನಗಳಿಂದ ಭಾಗವಹಿಸಿದರು.

**ವಿಟ್ಲ ಸ್ವಸ್ತಿಕ್ ಕಲೋತ್ಸವದಲ್ಲಿ ಭಾಗಿ 24/2/24**




ದಿನಾಂಕ 24/2/24 ರಂದು ವಿಟ್ಲ ಸ್ವಸ್ತಿಕ್ ಕಲೋತ್ಸವದ ಪ್ರಯುಕ್ತ ಶ್ರೀ ರಾಮ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ವಸು ವತ್ಸಲೆ ಭಾರತ ಎಂಬ ವಿಷಯದ ಕುರಿತು ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಸುಮಾರು 75 ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

**NEP ಕಾರ್ಯಾಗಾರದಲ್ಲಿ ಭಾಗಿ 24.02.24**

6ನೇ ಸೆಮಿಸ್ಟರ್ ವಿಷಯಗಳಿಗೆ ಸಂಬಂಧಿಸಿದಂತೆ NEP ಕಾರ್ಯಾಗಾರವು ಬಲ್ಮಠ ಮಹಿಳಾ ಕಾಲೇಜಿನಲ್ಲಿ ನಡೆಯಿತು. ವಿನುತಾ ಮತಾಜಿ ಮತ್ತು ಹರ್ಷಿತ್ ಶ್ರೀಮಾನ್ ಭಾಗವಹಿಸಿದ್ದರು.ವಿನುತಾ ಮತಾಜಿ ಅವರು ಸುಧಾರಿತ ಹಣಕಾಸು ನಿರ್ವಹಣೆ ವಿಷಯದ ಕಾರ್ಯಾಗಾರದಲ್ಲಿ ಮತ್ತು ಹರ್ಷಿತ್ ಶ್ರೀಮಾನ್ ಅವರು ಸಾಂಸ್ಕೃತಿಕ ವೈವಿಧ್ಯ ವಿಷಯದ ಕಾರ್ಯಾಗಾರದಲ್ಲಿ ಭಾಗವಹಿಸಿರುತ್ತಾರೆ.

**ಐಟಿ ಫೆಸ್ಟ್ ಭಾಗಿ 28.02.2024 ಮತ್ತು 29.2.2024**

ವಿವೇಕಾನಂದ ಕಾಲೇಜು ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ ನೆಹರು ನಗರ ,ಪುತ್ತೂರು ಇಲ್ಲಿನ ಎಂ.ಸಿ.ಎ ವಿಭಾಗದವರು ಆಂತರ್ಯ 2K24(Aantarya 2K24) ರಾಷ್ಟ್ರ ಮಟ್ಟದ ಅಂತರ್ ಕಾಲೇಜು ಐಟಿ ಫೆಸ್ಟ್ ಆಯೋಜಿಸಿದ್ದರು.ಈ ಫೆಸ್ಟ್ ನಲ್ಲಿ ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ಬಿ.ಸಿ.ಎ ವಿಭಾಗದ ಒಟ್ಟು 14 ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.ಮತ್ತು ಕಾಲೇಜಿನ ಉಪನ್ಯಾಸಕಿಯಾದ ಕು। ರಕ್ಷಾ ಮಾತಾಜಿ ಇವರು ಜೊತೆಗಿದ್ದರು.



**ಯಕ್ಷಧ್ರುವ ವಿದ್ಯಾರ್ಥಿ ಸಮ್ಮಿಲನ 2024–25**

06.02.2024 ರಂದು ಆಳ್ವಾಸ್ ವಿದ್ಯಾಗಿರಿ ಕ್ಯಾಂಪಸ್ ಮೂಡಬಿದಿರೆಯಲ್ಲಿ ನಡೆದ ಪ್ರಾಥಮಿಕ & ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ಯಕ್ಷಗಾನ ಕಲೆಯಾಧಾರಿತ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಪ್ರೌಢಶಾಲೆಯ 42 ವಿದ್ಯಾರ್ಥಿಗಳು ಯಕ್ಷಗಾನ ಪ್ರದರ್ಶನ ನೀಡಿದರು.



**ಪೋಷಕರ ಸಭೆ 06.02.2024**

10ನೇ ತರಗತಿಯ ವಿದ್ಯಾರ್ಥಿಗಳ 2023–24 ಸಾಲಿನ ಪೋಷಕರ ಸಭೆ ನಡೆಸಲಾಯಿತು. ಶ್ರೀ ವಸಂತ ಮಾಧವ ಶ್ರೀಮಾನ್, ಮಾರ್ಗದರ್ಶನ ಮಾಡಿದರು. ಸಹ ಸಂಚಾಲಕರು, ಆಡಳಿತಾಧಿಕಾರಿ, ಶಿಕ್ಷಣ ಪರಿವೀಕ್ಷಕರು, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.



**ಪೋಷಕರಿಗೆ ಯೋಗಾಸನ 06.02.2024**

ರಥಸಪ್ತಮಿಯ ಅಂಗವಾಗಿ ಪೋಷಕರಿಗೆ ಯೋಗಾಸನ ತರಬೇತಿಯನ್ನು ನಡೆಸಲಾಯಿತು. ವಿದ್ಯಾಭಾರತಿ ಜಿಲ್ಲಾ ಯೋಗ ಪ್ರಮುಖರಾದಂತಹ ಸಂಜಯ್ ಸಿ.ವಿ ಇವರು ನಡೆಸಿಕೊಟ್ಟರು. 12 ಜನ ಪೋಷಕರು ಭಾಗವಹಿಸಿದ್ದರು.



**ಶ್ರೀರಾಮ ಪ್ರೌಢಶಾಲೆ ತೃತೀಯ ಸ್ಥಾನ 10.2.24**

ದ.ಕ ಜಿ. ವೃತ್ತಿ ಶಿಕ್ಷಕ ಶಿಕ್ಷಣ ಸಂಘ ಸಾ.ಶಿ.ಇ ಮತ್ತು ಶ್ರೀ ಶಾರದಾ ಪ್ರೌಢಶಾಲೆ ಪಾಣೆಮಂಗಳೂರು ಇದರ ಆಶ್ರಯದಲ್ಲಿ ನಡೆದ ಜಿಲ್ಲಾಮಟ್ಟದ ವೃತ್ತಿ ಶಿಕ್ಷಣ ಕಲಿಕೋತ್ಸವ ಮತ್ತು ವಸ್ತು ಪ್ರದರ್ಶನದಲ್ಲಿ ತೃತೀಯ ಸ್ಥಾನ.



**ರಥ ಸಪ್ತಮಿ 16.02.2024**

ಶ್ರೀ ರಾಜಾರಾಂ ಐತಾಳ್ (ಪುತ್ತೂರು ಜಿಲ್ಲಾ ವಿಶ್ವ ಹಿಂದೂ ಪರಿಷತ್ ಸತ್ಸಂಗದ ಸಹ ಪ್ರಮುಖ್ ಹಾಗೂ ಭಜನಾ ಕೀರ್ತನಾಕಾರರು) ರವರು ರಥ ಸಪ್ತಮಿ ಪ್ರಾಮುಖ್ಯತೆಯನ್ನು ತಿಳಿಸಿಕೊಟ್ಟರು.



**21.02.2024 ಮತ್ತು 22.02.2024**

ಶ್ರೀರಾಮ ಮಂದಿರದ ಶತಾಬ್ದಿ ಸಂಭ್ರಮ ಕಾರ್ಯಕ್ರಮದ ನಿಮಿತ್ತ ಸಂಗ್ರಹವಾಗಿರುವ ಶ್ರೀರಾಮ ಪ್ರೌಢಶಾಲಾ ವಿದ್ಯಾರ್ಥಿಗಳ ಹೊರೆ ಕಾಣಿಕೆ.

## ಸೆಕೆಂಡರಿ ಸ್ಕೂಲ್



**ಫೆ 3–ಫೆ16ರವರೆಗೆ ರಥಸಪ್ತಮಿ ಕಾರ್ಯಗಾರ**

70ಜನ ಭಾಗವಹಿಸಿ 350. ಸೂರ್ಯ ನಮಸ್ಕಾರ ಮಾಡಿದರು. ಯೋಗ ಗುರುಗಳಾದ ಎಚ್.ಎಸ್ ಬಸವರಾಜು ಶ್ರೀಮಾನ್ ಇವರು ರಥಸಪ್ತಮಿ ದಿನದ ವಿಶೇಷತೆಯನ್ನು ಹಂಚಿಕೊಂಡರು.




**ಸಾಮೂಹಿಕ ಭಜನಾ ಕಾರ್ಯಕ್ರಮ 23.2.24**

ಶ್ರೀರಾಮ ಮಂದಿರದಲ್ಲಿ ಶ್ರೀರಾಮ ಸೆಕೆಂಡರಿ ಸ್ಕೂಲ್‌ನ ತರಗತಿಯ ವಿದ್ಯಾರ್ಥಿಗಳು ಭಜನಾ ಕಾರ್ಯಕ್ರಮ ನಡೆಸಿಕೊಟ್ಟರು. ಹಾಗೂ ಕುಂಕುಮಾರ್ಚನೆಯಲ್ಲಿ ಭಾಗವಹಿಸಿದರು.



**ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸ 19.01.2024**

9ನೇ ತರಗತಿಯ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸದಲ್ಲಿ ಮಣಿಪಾಲ ಮ್ಯೂಸಿಯಂ, ತಾರಾಲಯ, ಉದಯವಾಣಿ ಪ್ರೆಸ್, ಉಡುಪಿ ಮಠ, ಮಲ್ಪೆ, ಕಾಪು ಬೀಚ್‌ನ್ನು ಸಂದರ್ಶಿಸಲಾಯಿತು.

## ಪದವಿಪೂರ್ವ



**ವಾರ್ಷಿಕ ಭಜನೆ 03.02.2024**

ಗಣಿತಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಜಯಲಕ್ಷ್ಮಿ ದೀಪಬೆಳಗಿಸಿ ವಾರ್ಷಿಕ ಭಜನೆಗೆ ಚಾಲನೆ ನೀಡಿದರು. ಸಂಸ್ಕೃತ ಉಪನ್ಯಾಸಕರಾದ ಶ್ರೀ ಮಹೇಂದ್ರ ಮಂಜುನಾಥ್ ಭಟ್ ಕಾರ್ಯಕ್ರಮ ನಿರ್ವಹಣೆ ಮಾಡಿದರು.



**ಪ್ರೌಢಶಾಲಾ ಭೇಟಿ 2024**

ಪ.ಪೂ ವಿದ್ಯಾಲಯದ ವತಿಯಿಂದ ಕಲ್ಲಡ್ಕ ಸುತ್ತಮುತ್ತಲಿನ ವಿವಿಧ ಪ್ರೌಢಶಾಲೆಗಳಿಗೆ ಭೇಟಿ ನೀಡಿ ಕಾಲೇಜಿನ ಮಾಹಿತಿಯನ್ನು ಉಪನ್ಯಾಸಕರಾದ ಶ್ರೀ ಅಶೋಕ್ ಕುಮಾರ್ ನೀಡಿದರು, ಶ್ರೀ ಮಹೇಂದ್ರ ಭಟ್ ಸಹಕರಿಸಿದರು.



**ಪೋಷಕರ ಸಭೆ 29.02.2024**

2024–25 ಸಾಲಿನ ದ್ವಿ.ಪಿಯುಸಿ ವಿದ್ಯಾರ್ಥಿಗಳ ವಿಶೇಷ ತರಗತಿಯ ಕುರಿತು ಪೋಷಕರ ಸಭೆಯನ್ನು ಕರೆಯಲಾಗಿತ್ತು. ಸಂಚಾಲಕರಾದ ಶ್ರೀ ವಸಂತ ಮಾಧವ ಶ್ರೀಮಾನ್ ವಿಶೇಷ ತರಗತಿಯ ಮಹತ್ವವನ್ನು ತಿಳಿಸಿದರು.

## ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರ 11.02.2024 – 17.02.2024






ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನೆ 11.02.2024

ಸ್ವಾರ್ಥ ಸರಿಸಿ, ದೇಶ ಪ್ರೇಮ ಬೆಳೆಸಿ, ವ್ಯಕ್ತಿತ್ವ ವಿಕಸನವೇ ಶಿಬಿರದ ಮೂಲ ಉದ್ದೇಶ:
– ಶ್ರೀ ಸತೀಶ್ಚಂದ್ರ ಎಸ್. ಆರ್.




ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ 17.02.2024

ಸೇವಾ ಮನೋಭಾವ ಮಾನವತೆಯ ಸಂಕೇತ:
– ಡಾ| ಪ್ರಭಾಕರ್ ಭಟ್ ಕಲ್ಲಡ್ಕ

## ದೀಪ ಪ್ರದಾನ 09.02.2024







**ದ್ವಿತಿಯ ಪಿಯುಸಿ ವಿದ್ಯಾರ್ಥಿಗಳ ದೀಪ ಪ್ರದಾನ:** ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಮಾತನಾಡಿ ಶ್ರೀರಾಮನ ಚಿಂತನೆಯೊಂದಿಗೆ ಶ್ರೀರಾಮ ವಿದ್ಯಾ ಕೇಂದ್ರ ಪ್ರಾರಂಭವಾಗಿದೆ ವಿದ್ಯಾರ್ಥಿಗಳಲ್ಲಿ ಮಾನವೀಯತೆಯ ಗುಣಗಳನ್ನು ಬೆಳೆಸುವುದು ಮತ್ತು ಭಾರತೀಯ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವುದು ನಮ್ಮ ವಿದ್ಯಾಸಂಸ್ಥೆಯ ಧ್ಯೇಯವಾಗಿದೆ. ಪ್ರತಿಯೊಬ್ಬನಲ್ಲೂ ದೈವತ್ವದ ಗುಣ ಇದೆ, ಜ್ಞಾನ, ಚಾರಿತ್ರ್ಯ, ಜೀವನ ಪರೀಕ್ಷೆಯೇ ನಮ್ಮ ಶಿಕ್ಷಣ ಎಂಬ ಸಂಕಲ್ಪದೊಂದಿಗೆ ಎಲ್ಲಾ ವಿದ್ಯಾರ್ಥಿಗಳಿಗೆ ತಿಲಕ ಧಾರಣೆ ಮಾಡಿ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಶ್ರೀ ಮಂಜುನಾಥ್ ಮಾಲಕರು ಸಚಿನ್ ಟ್ರೇಡರ್ಸ್ ಪುತ್ತೂರು, ಶ್ರೀ ಜಗನ್ನಿವಾಸ ರಾವ್ ನಗರಸಭೆ ಸದಸ್ಯರು ಪುತ್ತೂರು, ಶ್ರೀ ಮಹಾಬಲ ಶೆಟ್ಟಿ ಮಂಗಳೂರು, ಶ್ರೀ ಕರುಣಾಕರ ಶೆಟ್ಟಿ ಮಾಲಕರು ಹೋಟೆಲ್ ಸಮುದ್ರ, ಡಾ. ಮನೋಜ್ ಮತ್ತು ಶ್ರೀಮತಿ ವಿದ್ಯಾ ಮನೋಜ್, ಡಾ. ಕಮಲ ಪ್ರಭಾಕರ್ ಭಟ್, ಸಹಸಂಚಾಲಕರಾದ ಶ್ರೀ ರಮೇಶ್ ಶ್ರೀಮಾನ್, ಪ್ರಾಚಾರ್ಯರಾದ ವಸಂತ ಬಲ್ಲಾಲ್ ಉಪಸ್ಥಿತರಿದ್ದರು.

ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

| | |
|---|---|
| ಚಿನ್ನಾಭರಣ ಸಾಲ | – 11% |
| ಜಾಮೀನು ಸಾಲ | – 16.5% |
| ಅಡವು ಸಾಲ | – 13.5% |
| ವಾಹನ ಸಾಲ | – 12% |
| ಗೃಹ ನಿರ್ಮಾಣ ಸಾಲ | – 11.5% |

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

| | |
|---|---|
| 91ದಿನಗಳವರೆಗೆ | – 7.5% |
| 92ರಿಂದ 181 ದಿನಗಳು | – 8% |
| 182 ರಿಂದ 364 ದಿನಗಳು | – 9% |
| 1 ವರ್ಷ ಮತ್ತು ಮೇಲ್ಪಟ್ಟು | – 10% |

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.

Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

ಸರಯೂ

Vol. : 10 Issue :10 Rs. 10/-

KARKAN/2014/62363
Posted at Kalladka P.O.
on 10th and 15th of
Every month

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Website : www.shriramakalladka.in, www.srvk.org E-mail : info@srvk.org

BOOK POST

ಸವಿದೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763. Printed at Digantha Mudrana Ltd. Mangaluru 575008, Bantwal Tq., Dakshina Kannada, Karnataka. Registration No. : KARKAN/2014/62363